ಅ. ಗದಗ ತಾಲ್ಲೂಕು ಲಕ್ಕುಂಡಿ ಉತ್ಸವವನ್ನು ಎಂದು ಉದ್ಘಾಟಿಸಲಾಗುವುದು.

ಆ. ಹಿಂದಿನಿಂದಲೂ ಲಕ್ಕುಂಡಿ ಉತ್ಸವದಲ್ಲಿ ಅತ್ತಿಮಬ್ಬೆ ಪ್ರಶಸ್ತಿಯನ್ನು ಈ ಭಾರಿಯು ನೀಡಲಾಗುವುದೆ;

ಇ. ಲಕ್ಕುಂಡಿ ಉತ್ಸವ ನಡೆಸುವ ಸಲುವಾಗಿ ಲಕ್ಕುಂಡಿ ಗ್ರಾಮದ ಅಭಿವೃದ್ಧಿಗಾಗಿ ಸರ್ಕಾರ ವಿಶೇಷ ಅನುದಾನವನ್ನೇನಾದರು ಬಿಡುಗಡೆ ಮಾಡುವುದೇ?

ಶ್ರೀ ಧರಂಸಿಂಗ್ (ಸನ್ಮಾನ್ಯ ಮುಖ್ಯಮಂತ್ರಿಗಳು) :

ಅ. ಸುನಾಮಿ ಪ್ರಕೃತಿ ವಿಕೋಪದ ಹಿನ್ನೆಲೆಯಲ್ಲಿ ಸರ್ಕಾರವು ಜಿಲ್ಲಾ ಉತ್ಸವಗಳನ್ನು ಮುಂದೂಡಿರುವ ಪ್ರಯುಕ್ತ ಲಕ್ಕುಂಡಿ ಉತ್ಸವವನ್ನು ಮುಂದೂಡಲಾಗಿದೆ.

ಆ. ದಾನ ಚಿಂತಾಮಣಿ ಅತ್ತಿಮಬ್ಬೆ (ಪ್ರಶಸ್ತಿ) ಆಯ್ಕೆ ಹಾಗೂ ಲಕ್ಕುಂಡಿ ಉತ್ಸವ ಏಕಕಾಲದಲ್ಲಿ ನಡೆದಾಗ ಈ ಪ್ರಶಸ್ತಿಯನ್ನು ಲಕ್ಕುಂಡಿ ಉತ್ಸವದಲ್ಲಿ ಪ್ರಧಾನ ಮಾಡಲಾಗುವುದು. ಇಲ್ಲವಾದಲ್ಲಿ ಪ್ರಶಸ್ತಿಯನ್ನು ಪ್ರತ್ಯೇಕವಾಗಿ ಪ್ರಧಾನ ಮಾಡಲಾಗುತ್ತದೆ.

ಇ. ಸರ್ಕಾರದ ಮುಂದೆ ಪ್ರಸ್ತಾಪ ಇರುವುದಿಲ್ಲ.

1629(2017) ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) ಕೃಷಿ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ. ಬೆಳ್ತಂಗಡಿ ತಾಲ್ಲೂಕು ವ್ಯಾಪ್ತಿಯಲ್ಲಿ ಜಲಾನಯನ ಇಲಾಖೆಯವರು ರೂಪಿಸಿರುವ ನೀರು ಬಳಕೆದಾರರ ಸಂಘಗಳೆಷ್ಟು;

ಆ. ಈ ಯೋಜನೆಯಡಿಯಲ್ಲಿ ತಾಲ್ಲೂಕಿನಲ್ಲಿ ಎಲ್ಲೆಲ್ಲಿ ಯಾವ ಯಾವ ಕಾಮಗಾರಿಗಳು ನಡೆಯುತ್ತಿವೆ (ವಿವರ ನೀಡುವುದು);

ಇ. ಬೆಳ್ತಂಗಡಿ ತಾಲ್ಲೂಕು ವ್ಯಾಪ್ತಿಗೆ ಆರ್ಥಿಕ ವರ್ಷದಲ್ಲಿ ಜಲಾನಯನ ಯೋಜನೆಗಳಿಗೆ ಬಿಡುಗಡೆ ಮಾಡಿದ ಅನುದಾನಗಳೇನು?

ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು) :

ಅ. ಜಲಾನಯನ ಅಭಿವೃದ್ಧಿ ಇಲಾಖೆಯಿಂದ ನೀರು ಬಳಕೆದಾರರ ಸಂಘಗಳನ್ನು ರಚಿಸಿರುವುದಿಲ್ಲ. ಆದರೆ ಇಲಾಖೆಯು ಜಲಾನಯನ ಸಂಘಗಳನ್ನು ರಚಿಸಿದ್ದು ಇಲಾಖೆಯ ಕಾರ್ಯಕ್ರಮಗಳನ್ನು ಜಲಾನಯನ ಸಂಘಗಳ ಮುಖಾಂತರ ಅನುಷ್ಟಾನಗೊಳಿಸಲಾಗುತ್ತಿದೆ.

ಆ. 2004.05ನೇ ಸಾಲಿನಲ್ಲಿ ಬೆಳ್ತಂಗಡಿ ತಾಲ್ಲೂಕಿನಲ್ಲಿ ಕೈಗೊಳ್ಳಲಾಗುತ್ತಿರುವ ವಿವಿಧ ಜಲಾನಯನ ಅಭಿವೃದ್ಧಿ ಕಾಮಗಾರಿಗಳ ವಿವರಗಳನ್ನು ಕೆಳಗೆ ನೀಡಲಾಗಿದೆ.

ಯೋಜನೆ	ಕಾಮಗಾರಿ	ಕಾಮಗಾರಿ ಸ್ಥಳ
ಎಸ್.ಜೆ.ಆರ್.ವೈ (ಜಿ.ಪಂ.)	ಕಿಂಡಿ ಅಣಿಕಟ್ಟು	ನಾರಾವಿಯ–1
	ತಡೆಗೋಡೆ	ಕುಕ್ಕಳ–1
		ಶಿಶಿಲ ಗಿರಿಜನ
ಎಸ್. ಜೆ.ಆರ್.ವೈ. (ತಾ.ಪಂ.)	ಕೆರೆ ಹೊಳೆತ್ತುವುದು	ಪಿತ್ತಲ ಗುರಿ–1
ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆ	ಕಿಂಡಿ ಅಣಿಕಟ್ಟು	ಕಾಯರ್ ತೋಡಿ–1
		ಕಲ್ಲೇರಿ–1

		ಮಂಡೂರು–1
		ಪಾದಮೇಲು–1
		ಬಳಂಜ–1
		ಗೋಳಿದಡಿ–1
		ಕೊಯ್ಯೂರು–1
	ತಡೆ ಅಣೆ	ನಾಮಗುರಿ–1
	ಕೃಷಿ ಹೊಂಡ	ಕಾಯಿರ್‌ತೋಡಿ–4
		ಮಂಡೂರು–9
		ತೆಂಕಕಾರಂದೂರು–2
	ನಾಲಾರಿ ವೀಟ್ ಮೆಂಟ್	ಮಂಡೂರು–2
		ಸಂಪಿಗೆ ತ್ತಾಯ–1
		ಬಳಂಜ–1
ವಿಶೇಷ ಘಟಕ ಯೋಜನೆ	ತಡುಗೋಡೆ ರಚನೆ	ಅಳದಂಗಡಿ–1
ಗಿರಿಜನ ಉಪಯೋಜನೆ	ನಾಲಾರಿವಿಟ್ ಮೆಂಟ್	ಬಂಜಾರು ಮನೆ
ರಾಷ್ಟ್ರೀಯ ಜಲಾನಯನ ಅಭಿವೃದ್ಧಿ ಯೋಜನೆ	ಕಿಂಡಿ ಅಣೆಕಟ್ಟು	ನಾರಾವಿ–2
	ಕೃಷಿಹೊಂಡ	ನಾರಾವಿ–16

2004–05ನೇ ಆರ್ಥಿಕ ವರ್ಷದಲ್ಲಿ ಬೆಳ್ತಂಗಡಿ ತಾಲ್ಲೂಕಿಗೆ ಜಲಾನಯನ ಅಭಿವೃದ್ಧಿ ಕಾಮಗಾರಿಗಳಿಗಾಗಿ ಒದಗಿಸಲಾಗಿರುವ ಅನುದಾನದ ವಿವರಗಳನ್ನು ಕೆಳಗೆ ನೀಡಲಾಗಿದೆ.

ಯೋಜನೆ	ಬಿಡುಗಡೆಯಾದ ಮೊತ್ತ (ರೂ.ಲಕ್ಷಗಳಲ್ಲಿ)
ಎಸ್. ಜೆ. ಆರ್.ವೈ.(ಜಿ.ಪ)	2.600
ಎಸ್. ಜಿ.ಆರ್.ವೈ.(ತಾ.ಪ.)	0.30
ಪಶ್ಚಿಮಘಟ್ಟ ಅಭಿವೃದ್ಧಿ ಯೋಜನ	19.000
ವಿಶೇಷ ಘಟಕ ಯೋಜನೆ	0.426
ಗಿರಿಜನ ಉಪಯೋಜನೆ	0.568
ರಾಷ್ಟ್ರೀಯಜಲಾನಯನ ಅಭಿವೃದ್ಧಿ ಯೋಜನೆ	9.990
ಒಟ್ಟು	**32.884**